## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 21 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ನ್ಯಾಯಬೆಲೆ ಅಂಗಡಿಯ ಮೂಲಕ ಯಾವ ಯಾವ ವಸ್ತುಗಳನ್ನು ವಿತರಿಸಲಾಗುತ್ತದೆ; (ವಸ್ತುವಾರು ವಿವರ ನೀಡುವುದು)</td><td>ಅನ್ನಭಾಗ್ಯ ಯೋಜನೆಯಡಿ ನ್ಯಾಯಬೆಲೆ ಅಂಗಡಿ ಮುಖಾಂತರ ಸಾರ್ವಜನಿಕ ವಿತರಣಾ ಪದ್ಧತಿಯಡಿ ಅಕ್ಕಿ/ರಾಗಿ/ಜೋಳವನ್ನು ವಿತರಣೆ ಮಾಡಲಾಗುತ್ತಿದ್ದು, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುವ ರಾಗಿ ಮತ್ತು ಜೋಳವನ್ನು ಲಭ್ಯತೆಗನುಗುಣವಾಗಿ ವಿತರಣೆ ಮಾಡಲಾಗುತ್ತಿದೆ.
<table>
<tr><th>ಪಡಿತರ ಚೀಟಿಯ ವಿಧ</th><th>ಪ್ರಮಾಣ</th><th>ದರ</th></tr>
<tr><td>ಅಂತ್ಯೋದಯ ಅನ್ನಯೋಜನೆ (AAY)</td><td>ಪ್ರತಿ ಪಡಿತರ ಚೀಟಿಗೆ 35 ಕೆ.ಜಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 21 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ 14 ಕೆ.ಜಿ ರಾಗಿ/ ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.</td><td>ಉಚಿತ</td></tr>
<tr><td>ಆದ್ಯತಾ ಕುಟುಂಬ (PHH)</td><td>ಪ್ರತಿ ಸದಸ್ಯರಿಗೆ 5 ಕೆ.ಜಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 3 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ 02 ಕೆ.ಜಿ ರಾಗಿ/ ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.</td><td>ಉಚಿತ</td></tr>
</table>
</td></tr>
</table>

<table>
<tr>
<td>ಆ</td>
<td>ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ನ್ಯಾಯಬೆಲೆ ಅಂಗಡಿಯ ಮೂಲಕ ವಿತರಿಸಲು ಎಷ್ಟು ಪ್ರಮಾಣದಲ್ಲಿ ಯಾವ ಯಾವ ವಸ್ತುಗಳನ್ನು ಖರೀದಿಸಲಾಗುತ್ತದೆ; (ವಸ್ತುವಾರು ವಿವರ ನೀಡುವುದು)</td>
<td>ಕೇಂದ್ರ ವ್ಯಾಪ್ತಿಯ NFSA ಫಲಾನುಭವಿಗಳಿಗೆ ವಿತರಿಸಲು ಕೇಂದ್ರದಿಂದ 217403 ಎಂ.ಟಿ ಪ್ರಮಾಣದ ಆಹಾರಧಾನ್ಯವನ್ನು ಉಚಿತವಾಗಿ ಪೂರೈಸಲಾಗುತ್ತಿದೆ. ಕೇಂದ್ರ ಎನ್‌ಎಫ್ ಎಸ್ ಎ ಪಡಿತರ ಚೀಟಿ ಮತ್ತು ಫಲಾನುಭವಿಗಳ ವಿವರ ಕೆಳಗಿನಂತಿದೆ.
<table>
<tr><th>ಪಡಿತರ ಚೀಟಿಯ ವಿಧ</th><th>ಪಡಿತರ ಚೀಟಿಗಳ ಸಂಖ್ಯೆ</th><th>ಫಲಾನುಭವಿಗಳ ಸಂಖ್ಯೆ</th></tr>
<tr><td>ಅಂತ್ಯೋದಯ ಅನ್ನ ಯೋಜನೆ</td><td>1078270</td><td>4359560</td></tr>
<tr><td>ಆದ್ಯತಾ ಪಡಿತರ ಚೀಟಿ</td><td>10300575</td><td>35718130</td></tr>
<tr><td>ಒಟ್ಟು</td><td>11378845</td><td>40077690</td></tr>
</table>
ಪ್ರಸ್ತುತ ರಾಜ್ಯ ವಾಪ್ತಿಯ NFSA ಫಲಾನುಭವಿಗಳಿಗೆ ವಿತರಿಸಲು ಪ್ರತಿ ಮಾಹೆ ಅಗತ್ಯವಿರುವ 20,000 ಮೆಟ್ರಿಕ್ ಟನ್ ಪ್ರಮಾಣದ ಅಕ್ಕಿಯನ್ನು ಕೇಂದ್ರ ಸರ್ಕಾರದ ಸಂಸ್ಥೆಗಳಾದ ಕೇಂದ್ರೀಯ ಬಂಢಾರ ಮತ್ತು ಎನ್.ಸಿ.ಸಿ.ಎಫ್ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆ. ಪ್ರಸ್ತುತ ರಾಜ್ಯ ವ್ಯಾಪ್ತಿಯ 13,50,824 ಎನ್‌ಎಫ್‌ಎಸ್‌ಎ ಪಡಿತರ ಚೀಟಿಗಳ 35,93,376 ಫಲಾನುಭವಿಗಳಿಗೆ ರಾಜ್ಯ ಸರ್ಕಾರದ ವತಿಯಿಂದ ಅಕ್ಕಿ ಖರೀದಿಸಿ ವಿತರಿಸಲಾಗುತ್ತಿದೆ..</td>
</tr>
<tr>
<td>ಇ</td>
<td>ಈ ಇಲಾಖೆಯಿಂದ ನ್ಯಾಯಬೆಲೆ ಅಂಗಡಿಯ ಮೂಲಕ ವಿತರಿಸಲು ಸರ್ಕಾರವು ಖರೀದಿಸುವ ವಸ್ತುಗಳಿಗೆ ಪ್ರತಿ ಕೆ.ಜಿಗೆ ನಿಗದಿಪಡಿಸಲಾದ ದರವೆಷ್ಟು? (ಸರಬರಾಜುದಾರರು ಮತ್ತು ಸಾಗಾಣಿಕೆದಾರರ ಹೆಸರು ಮತ್ತು ಸಂಪೂರ್ಣ ವಿವರದೊಂದಿಗೆ ವಸ್ತುವಾರು ವಿವರ ನೀಡುವುದು)</td>
<td>ರಾಜ್ಯದ ಕೇಂದ್ರ NFSA ಫಲಾನುಭವಿಗಳಿಗೆ ಹಂಚಿಕೆ ಮಾಡಲು ಕೇಂದ್ರ ಸರ್ಕಾರವು ರಾಜ್ಯಕ್ಕೆ ಉಚಿತವಾಗಿ ಆಹಾರಧಾನ್ಯ ಬಿಡುಗಡೆ ಮಾಡುತ್ತಿದ್ದು, ಕೇಂದ್ರದಿಂದ ಬಿಡುಗಡೆ ಮಾಡುವ ಅಕ್ಕಿ ಪ್ರಮಾಣವನ್ನು ಭಾರತ ಆಹಾರ ನಿಗಮದ ಗೋದಾಮುಗಳಿಂದ ತಾಲ್ಲೂಕು ಗೋದಾಮುಗಳಿಗೆ ಎತ್ತುವಳಿ ಮಾಡಲಾಗುತ್ತಿದೆ.<br><br>ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ವಿತರಿಸಲಾಗುತ್ತಿರುವ ಆದ್ಯತಾ ಪಡಿತರ ಚೀಟಿಗಳ ಫಲಾನುಭವಿಗಳಿಗೆ ಹಾಗೂ ಕಲ್ಯಾಣ ಸಂಸ್ಥೆಗಳಿಗೆ ಜುಲೈ-2023ರ ಮಾಹೆಯಿಂದ ಹಂಚಿಕೆ ಮಾಡಲು ಪ್ರತಿ ತಿಂಗಳು ಅಗತ್ಯವಿರುವ 20,000 ಮೆ.ಟನ್ ಅಕ್ಕಿಯನ್ನು ಪ್ರತಿ ಕೆ.ಜಿ. ಗೆ ರೂ.34.60/-ರ ದರದಲ್ಲಿ ಕೇಂದ್ರ ಸರ್ಕಾರದ ಸಂಸ್ಥೆಗಳಾದ ಎನ್‌ಸಿಸಿಎಫ್, ನಾಫೆಡ್ ಮತ್ತು ಕೇಂದ್ರಿಯ ಭಂಡಾರ್ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆ.</td>
</tr>
</table>

ಅನಾಸ 46 ಅನಾಸ 2024

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು